ಒ.ಎಸ್. ನಂ.96/2016
ಡಿಡಬ್ಲು-1

ದಿನಾಂಕ 19.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ವಾಟಿ ಸವಾಲುಃ ವಾದಿ ಪರ ವಕೀಲರಿಂದ**

ವಾದಿ ಪರ ವಕೀಲರು OS No.95/2016 ರ ವಾದ ಪತ್ರವನ್ನು ಪ್ರತಿವಾದಿ ನಂ.6/dw-1 ಗೆ ತೋರಿಸಲಾಗಿ ಅವರು ತಮ್ಮ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-129 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ-129(ಎ) ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು OS No.95/2016 ರ ಪ್ರತಿವಾದ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ವಾದಿಯ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-130 ಎಂದು ಗುರುತಿಸಲಾಯಿತು. ಸದರಿ ದಾವೆಯನ್ನು ನಾನು ನಡೆಸದ ಕಾರಣ ಅದು ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ನಾನು ಪುನಃ ನಡೆಸಲು ಪ್ರಯತ್ನಿಸಿಲ್ಲ ಎಂದರೆ ಸರಿ.

ಈ ದಾವೆಯಲ್ಲಿ ರಾಜಾಸಾಬರವರು ನನ್ನ ತಂದೆ ಖಾಸಿಮಸಾಬರವರಿಗೆ ಮೌಖಿಕ ದಾನ ಮಾಡಿರುವ ಕುರಿತು ಪ್ರತಿವಾದಿ ಪತ್ರದಲ್ಲಿ ಹೇಳಿದ್ದು ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನನ್ನ ತಂದೆಗೆ ಮಂಜೂರಾದ ಜಮೀನಿನ ಬಗ್ಗೆ ನಾನು ಯಾವುದೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ವಾದಿ ಮತ್ತು ಪ್ರತಿವಾದಿಯರು ದಾವಾ ಸ್ವತ್ತುಗಳಲ್ಲಿ ಕಬ್ಜೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಒ ಎಸ್ ನಂ.95/2016 ರಲ್ಲಿ ನಾನು ವಾದಿಯರು ಕಬ್ಜಾ ವಹಿವಾಟಿಗೆ ತೊಂದರೆ ಮಾಡುತ್ತಿದ್ದಾರೆ ಎಂದು ಮತ್ತು ದಾವಾ ಸ್ವತ್ತಿನಲ್ಲಿ ನಮ್ಮ ಪಾಲು ಇರುತ್ತದೆ ಎಂದು ನಾನು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಬಿಸಾಬರವರು ದಾವಾ ಸ್ವತ್ತಿನಲ್ಲಿ ನಮ್ಮ ಪಾಲು ಇರುತ್ತದೆ ಎಂದು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಬಿಸಾಬರವರ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ.

ನಾನು ವಾದಿಯರಿಗೆ ಪಾಲು ಕೊಡಬಾರದೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಂದೆ ಖಾಸಿಮಸಾಬ ಒಬ್ಬರಿಗೆ ಮಂಜೂರಾಗಿರುವುದಿಲ್ಲ ಆದರೆ ಎಲ್ಲಾ ಜಂಟಿ ಕುಟುಂಬದ ಮತ್ರುಕಾ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಸೋಪಿಸಾಬ ಮತ್ತು ರಾಜಾಸಾಬರವರ ಹೆಸರು ಇರುತ್ತದೆ

ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 8ನೆ ಪ್ರತಿವಾದಿಯರಿಗೆ ತಿಳಿಸದೆ ನನ್ನ ತಂದೆ ದಾವಾ ಸ್ವತ್ತನ್ನು ಅಡಮಾನ ಮಾಡಿರುತ್ತಾರೆ ಸದರಿ ಸ್ವತ್ತನ್ನು ವಾದಿ ಮತ್ತು 8ನೆ ಪ್ರತಿವಾದಿಯರಿಗೆ ತಿಳಿಸದೆ ನಾನು ಬಿಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಸ್ವತ್ತಿನ ಮಾಲಿಕನಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಹಕ್ಕು ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ